**ಪಿ.ಡಬ್ಲ್ಯೂ- 1** **OS 266/2022**

ದಿನಾಂಕಃ 25-09-2023 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಪಾಟೀಸವಾಲು:</u>** ಪ್ರತಿವಾದಿ ನಂ.2 ಮತ್ತು 3 ಪರ ಶ್ರೀ ವಿ.ಎಸ್.ಕೆ. ವಕೀಲರಿಂದ:

1 ನೇ ವಾದಿಯು 1 ನೇ ಪ್ರತಿವಾದಿಯ ಶಾಲೆಯಲ್ಲಿ 1 ರಿಂದ 5 ನೇ ತರಗರಿವರೆಗೆ ಓದಿದ್ದಾನೆ. ಕುಷ್ಟಗಿ ತಾಲೂಕಿನಲ್ಲಿ 1 ನೇ ಪ್ರತಿವಾದಿಯ ಶಾಲೆ ಬರುತ್ತದೆ. 1 ನೇ ಪ್ರತಿವಾದಿಯು ನನ್ನ ಮಗನ ಹೆಸರನ್ನು ತಪ್ಪಾಗಿ ನಮೂದ ಮಾಡಿದ್ದಾರೆ ಅದರಂತೆ ಉಳಿದ ಪ್ರತಿವಾದಿಯರು ನಮೂದ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನು 6 ರಿಂದ 8 ತರಗತಿವರೆಗೆ 2 ನೇ ಮತ್ತು 3 ನೇ ಪ್ರತಿವಾದಿಯ ಶಾಲೆಯಲ್ಲಿ ಕಲಿತಿದ್ದಾನೆ. ಪ್ರತಿವಾದಿಯರಿಗೆ ನೋಟಿಸ್ಸನ್ನು ನೀಡಿದ್ದೇವೆ. 2 ನೇ ಮತ್ತು 3 ನೇ ಪ್ರತಿವಾದಿಯರು ನೋಟಿಸ್ಸಿಗೆ ಉತ್ತರವನ್ನು ನೀಡಿದ್ದಾರೆ ಎಂದರೆ ಸರಿ. ಪ್ರತಿವಾದಿ ನಂ.1 ಇವರ ಶಾಲೆಯಲ್ಲಿ ನನ್ನ ಮಗನ ಹೆಸರನ್ನು ರಜಿಸ್ಟ್ರರನಲ್ಲಿ ನಮೂದ ಮಾಡಿರುತ್ತೇವೆ. 1 ನೇ ಪ್ರತಿವಾದಿಯೇ ನನ್ನ ಮಗನ ಹೆಸರು ತಿದ್ದುಪಡಿ ಮಾಡಬೇಕೆಂದರೆ ಸರಿ. 1 ನೇ ತರಗತಿಯ ದಾಖಲೆಗಳನ್ನು 2 ನೇ ತರಗತಿಯಲ್ಲಿ ಕೊಟ್ಟಿದ್ದೇನೆ ಎಂದರೆ ಸರಿ. 1 ನೇ ತರಗತಿ ದಾಖಲೆ ಪ್ರಕಾರ 2 ರಿಂದ 3 ನೇ ಪ್ರತಿವಾದಿಯರು ದಾಖಲು ಮಾಡಿಕೊಂಡಿದ್ದಾರೆ. 2 ನೇ ಮತ್ತು 3 ನೇ ಪ್ರತಿವಾದಿಯರ ಯಾವುದೇ ತಪ್ಪು ಇಲ್ಲ ಎಂದರೆ ಸರಿ. 2 ನೇ ಮತ್ತು 3 ನೇ ಪ್ರತಿವಾದಿಯರ ತಪ್ಪು ಇಲ್ಲದೇ ಇದ್ದರೂ ಕೂಡಾ ಖೊಟ್ಟಿ ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ